ಶ್ರೀ ಎಚ್. ಟಿ. ಕೃಷ್ಣಪ್ಪ. –ಹಾಗಾದರೆ ಇದಕ್ಕೆ ಯಾರು ಕಾರಣಕರ್ತರು ಎನ್ನುವ ಬಗ್ಗೆ ತಾವು ವಿಚಾರ ಮಾಡಿ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಕ್ರಮ ಜರುಗಿಸಿದ್ದೇವೆ.

ಶ್ರೀ ಎಚ್. ಕೃಷ್ಣಪ್ಪ.—ಐದು ವರ್ಷವಾಯಿತು. ಇನ್ನೂ ಕೆರೆ ಕೆಲಸ ಆಗಿಲ್ಲ. ಅಲ್ಲಿನ ಜನ ನಮ್ಮನ್ನು ಕೇಳುತ್ತಾರೆ. ಅವರಿಗೆ ಉತ್ತರ ಏನು ಕೊಡುವುದು ? ತಾವೂ ಮತ್ತು ತಮ್ಮ ಅಧಿಕಾರಿಗಳು ಇನ್ನೊಂದು ಸಮಾರಂಭ ಮಾಡಿ ಅಲ್ಲಿ ಹಾಕಿರತಕ್ಕ ಅಸ್ತಿಭಾರ ಶಿಲೆಯನ್ನು ಕಿತ್ತುಹಾಕಿದರೆ ಒಳ್ಳೆಯದಲ್ಲವೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆ ಕೆಲಸವನ್ನು ನೀವೇ ಮಾಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇದು ಮೇಲೆ ನೋಡುವುದಕ್ಕೆ ಚಿಕ್ಕ ಪ್ರಶ್ನೆಯಾದರೂ ಕೂಡಾ ಇದರಿಂದ ನಾವು ಅನುಭವಿಸುತ್ತಿರುವುದನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಇದು ಮಂಜೂರಾತಿಗೆ ಯೋಗ್ಯವಲ್ಲವೆಂದು ಕಂಡುಬಂದರೂ, ಇದನ್ನು ಯೋಗ್ಯ ರೀತಿಗೆ ಪರಿವರ್ತನೆ ಮಾಡುವುದಕ್ಕೆ ಅವಕಾಶವಿದ್ದರೆ ಆ ಬಗ್ಗೆ ಪುನರ್ ತನಿಖೆ ನಡೆಸಿ ಅದನ್ನು ಮಂಜೂರು ಮಾಡುವುದಕ್ಕೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಂ. ಎಂ. ಜೆ ಸದ್ಯೋಜಾತ.—ಪುನರ್ ತನಿಖೆ ಮಾಡಿಸುತ್ತೇವೆ, ಫೀಸಿಬಲ್ ಎಂದರೆ ಅದನ್ನು ಒದಗಿಸಿಕೊಡುತ್ತೇವೆ.

Construction of tanks in Humnabad Taluk

1030. SRI BASAVARAJ PATIL (Humnabad).—Will the Minister for Transport and Minor Irrigation be pleased to state :—

(a) whether Government has decided to take up the construction work of Gadavanthi, Changaleera and Muthangi tanks of Humnabad Taluk ;

(b) if so, when ;

(c) if so, whether assistance from the World Bank has been availed for this work ?

SRI M. M. J. SADYOJATHA (Minister for Transport and Minor Irrigation).—

(a) The works of Gadavanthi and Muthangi tanks have been left out due to financial difficulties. Estimate for Changaleera tank is under preparation.

(b) This question does not arise.

(c) Only the Changaleera new tank has been included in the list of works which would avail assistance from the World Bank.

ಶ್ರೀ ಬಸವರಾಜ ಪಾಟೀಲ್.—ಅಧ್ಯಕ್ಷರೆ, ಮೊದಲನೇ ಉತ್ತರದಲ್ಲಿ ಗಡವಂತಿ ಮತ್ತು ಮುತ್ತಂಗಿ ಕೆರೆಗಳನ್ನು ಕೈಬಿಡಲಾಗಿದೆಯೆಂದು ಹೇಳಿದ್ದೀರಿ. ಇವುಗಳ ಎಸ್ಟಿಮೇಟ್ ಮಾಡಿಸಿದ್ದೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಚಾಂಗಲೀರ ಹೊಸ ಕೆರೆಯನ್ನು ಮಾತ್ರ ಜಾಗತಿಕ ಬ್ಯಾಂಕಿನ ನೆರವನ್ನು ಪಡೆಯುವ ಕೆಲಸಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಗಡವಂತಿ ಮತ್ತು ಮುತ್ತಂಗಿ ಕೆರೆಗಳನ್ನು ಕೈಬಿಡಲಾಗಿದೆ.

ಶ್ರೀ ಬಸವರಾಜ ಪಾಟೀಲ್.—ಇದು ಹಿಂದುಳಿದಿರತಕ್ಕ ಜಿಲ್ಲೆ. ಇಲ್ಲಿ ಒಂದು ಎಕರೆ ನೀರಾವರಿ ಭೂಮಿ ಇಲ್ಲ. ಇದನ್ನು ಗಮನದಲ್ಲಿ ಇಟ್ಟುಕೊಂಡು ಎರಡರಲ್ಲಿ ಒಂದಾದರನ್ನೂ ತಮ್ಮ ಪಟ್ಟಿಯಲ್ಲಿ ಈ ವರ್ಷ ಸೇರಿಸಿ ಕೆಲಸ ಕೈಗೊಳ್ಳುವುದಕ್ಕೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಎ ಕೆರೆಗಳನ್ನು ಫ್ರೆಶ್ ಸರ್ವೇ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಬಸವರಾಜ ಪಾಟೀಲ್.—ಜಾಗತಿಕ ಬ್ಯಾಂಕಿನ ನೆರವನ್ನು ಪಡೆಯುವ ಬಗ್ಗೆ ಹೇಳಿದ್ದೀರಿ. ಈ ಕೆರೆಯನ್ನು ಸರ್ಕಾರ ಮೊದಲೇ ಎಸ್ಟಿಮೇಟ್ ಮಾಡಿದ ಸ್ಥಳದಲ್ಲಿ ನಿರ್ಮಿಸುತ್ತೀರಾ ಇಲ್ಲಾ ಬೇರೆ ಸ್ಥಳದಲ್ಲಿ ನಿರ್ಮಿಸುವುದರ ಬಗ್ಗೆ ವಿಚಾರ ಇದೆಯೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಮೊದಲನೆಯ ಸ್ಥಳದಲ್ಲೇ ಆ ಕೆರೆಯನ್ನು ಮಾಡಿಸುತ್ತೇವೆ.

ಶ್ರೀ ಬಸವರಾಜ ಪಾಟೀಲ್.—ಆ ಕೆರೆಯನ್ನು ಬೇರೆ ಕಡೆ ನಿರ್ಮಿಸುವ ವಿಷಯದಲ್ಲಿ ಆಗಿದೆಯೆಂದು ನಾನು ಕೇಳಿದೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಅದು ನಿಜವಲ್ಲ.

ಶ್ರೀ ಬಸವರಾಜ ಪಾಟೀಲ್.—ವಿಶ್ವಬ್ಯಾಂಕಿನ ನೆರವಿನಿಂದ ನಿರ್ಮಾಣವಾಗುವ ಬೇರೆ ಜಿಲ್ಲೆಗಳಲ್ಲಿರುವ ಕೆರೆಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಪ್ರತ್ಯೇಕ ಪ್ರಶ್ನೆ ಹಾಕಿ.

ಶ್ರೀ ಬಸವರಾಜ ಪಾಟೀಲ್.—ವಿಶ್ವಬ್ಯಾಂಕಿನ ನೆರವಿನಿಂದ ಈ ಕೆರೆ ಈ ವರ್ಷವೇ ನಿರ್ಮಾಣ ಮಾಡುವ ಬಗ್ಗೆ ಪ್ರಯತ್ನ ಪಡುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಮಾಡುತ್ತೇವೆ.

ಉಪಾಧ್ಯಕ್ಷರು.—ಪ್ರಶ್ನೋತ್ತರ ವೇಳೆ ಇಲ್ಲಿಗೆ ಮುಗಿಯಿತು.

QUESTIONS FOR ANSWERS ON THE DAY

)but not taken up)

Waiver of Co-operative loans from the Small Farmers in the State

841. SRI D. DEVARAJ URS (Hunsur) and SRI K. H. SRINIVAS (Shimoga).—Will the Minister for Co-operation be pleased to state :-

(a) whether the Government has constituted Committee for considering the waiver of co-operative loans due from the small and marginal farmers in the State ;

(b) if so, number of applications received and out of them how man ywere recommended by the Committee ;

(c) the number of cases wherein the loans have been waived (District-wise figures may please be given) ?

SRI H. C. SRIKANTAIAH (Minister for Co-operation). -

(a) Yes.

(b) (i) No. of applications received ... 5,54,029
(ii) No. of applications recommended ... 12,892

(c) 12,892 (Statement appended).